ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ಆ ಕೆಂಬಣ್ಣದ ಸುಂದರ ಕಾಯುತ್ತಿದ್ದಾನೆ

ಒಂಚೂರು ನಯ, ನಾಚಿಕೆ ಇಲ್ಲದ, ಜನರ ಸಾಮಿಪ್ಯದ ಸಲಿಗೆ ಬೆಳೆಸಿಕೊಂಡ ಹಕ್ಕಿಗಳು ಅದೆಷ್ಟೇ ಚೆಂದವಿದ್ದರೂ, ಮೃಗಾಲಯದ ಫೀಲಿಂಗ್ ಕೊಟ್ಟು ಬಿಡುತ್ತವೆ.



ಒಮ್ಮೆ ದಾಂಡೇಲಿಯಲ್ಲಿ ಹಕ್ಕಿಗಳ ಫೋಟೊ ತೆಗೆಯುವಾಗ ಮುಂಬೈನ ಸ್ಮಿತಾಬೆಹೆರ ಎಂಬ ನಗುಮುಖದ ಹೆಣ್ಣುಮಗಳು ಪರಿಚಯವಾದರು. ಆಕೆ ಆಗಷ್ಟೇ ಹಿಮಾಲಯದಂಚಿನ ಸತ್ತಾಲ್, ನೈನಿತಾಲ್, ಭೀಮ್ ತಾಲ್ ಎಂಬ ಊರುಗಳ ಪ್ರವಾಸ ಪೂರೈಸಿ ಬಂದಿದ್ದರು. ಆತ್ಮೀಯ ಮಾತುಕತೆಗಳು ಮುಗಿದ ಮೇಲೆ ಕ್ಯಾಮೆರಾ ಪರದೆ ಮೇಲೆ ತಾನೇ ತೆಗೆದ ಅನೇಕ ಬಣ್ಣಬಣ್ಣದ ಹಕ್ಕಿಗಳನ್ನು ತೋರಿಸುತ್ತಾ ಹೋದರು. ಕೇವಲ ಕರ್ನಾಟಕದ ಹಕ್ಕಿಗಳನ್ನಷ್ಟೇ ನೋಡಿದ್ದ ನನಗೆ ಈ ಹೊಸ ವರ್ಣದ ಖಗಗಳ ಅಂದಚಂದ ಬೆಕ್ಕಸ ಬೆರಗಾಗುವಂತೆ ಮಾಡಿದವು. ಹಕ್ಕಿ ಚಿತ್ರ ತೋರಿಸುತ್ತಿದ್ದವಳೂ ಅಪೂರ್ವ ಚೆಲುವೆಯಾದ ಕಾರಣ ಒಂಥರ ಸ್ಫೂರ್ತಿಯೂ ಸಿಕ್ಕಂತಾಯಿತು. ಅದರಲ್ಲೂ ಆಕೆ ವಿಶೇಷವಾಗಿ ಕಾಣಿಸಿದ ಸ್ಕೇರ್ಲೆಟ್ ಫಿಂಚ್ ಎಂಬ ಕೆಂಗುಲಾಬಿ ಬಣ್ಣದ ಪಕ್ಷಿ ಹುಚ್ಚು ಹಿಡಿಸುವಷ್ಟು ಸುಂದರವಾಗಿತ್ತು. ಹೀಗಾಗಿ ಉತ್ತರಖಂಡದ ಆ ಊರುಗಳಿಗೊಮ್ಮೆ ಹೋಗಿ ಬರೋಣ ಎಂದು ಪ್ಲಾನ್ ಮಾಡಿದ್ದು ಕೂಡಿ ಬಂದೇ ಬಿಟ್ಟಿತು.

ಜನವರಿ ತಿಂಗಳಲ್ಲಿ ಅಲ್ಲಿ ಬೀಕರ ಚಳಿ ಇರುತ್ತದೆ. ಈ ಋತುಮಾನದಲ್ಲಿ ಅನೇಕ ಬಗೆಯ ಹಕ್ಕಿಗಳು ವಲಸೆ ಬಂದು ಇಲ್ಲಿ ಮಾರ್ಚ್ ತನಕ ಠಿಕಾಣಿ ಹೂಡುತ್ತವೆ. ಬೆಟ್ಟಗಳ ನಡುವೆ ಹಾವಿನಂತೆ ಸುತ್ತು ಹೊಡೆದು ಸುಸ್ತು ಮಾಡುವ ಇಲ್ಲಿನ ರಸ್ತೆ ಹೊಯ್ದಾಟ ಹೆಚ್ಚಿಸಿ ಕರುಳನ್ನೇ ನುಲಿದು ಹಾಕುತ್ತವೆ. ಇಲ್ಲಿನ ಪ್ರಯಾಣ ತುಸು ಕಷ್ಟವೇನೆ. ಬರ್ಫ್ ಬಿದ್ದು ದಾರಿಗಳು ತುಂಬಾ ಜಖಂ ಆಗಿರುತ್ತವೆ.

ಕುತೂಹಲ ಹುಟ್ಟಿಸಿದ್ದು ಇಲ್ಲಿನ ಸಾಕಷ್ಟು ಊರುಗಳ ಹೆಸರ ತುದಿಯಲ್ಲಿ ಕಡ್ಡಾಯವಾಗಿ ಅಂಟಿಕೊಂಡ ತಾಲ್ ಎಂಬ ಶಬ್ದ. ಭೀಮ್ ತಾಲ್, ನೈನಿತಾಲ್, ನೌಕುಚ್ ತಾಲ್ ಹೀಗೆನೆ. ವಿಚಾರಿಸಿದಾಗ ತಾಲ್ ಎಂದರೆ ಸರೋವರ ಎಂದು ತಿಳಿಯಿತು. ನಮ್ಮಲ್ಲಿ ಊರಿಗೆ ಹೆಸರು ಕೆರೆಗಳ ಮೂಲಕ ಬಂದಂತೆ ಇಲ್ಲಿ ತಾಲ್ ಗಳು ತಳಕು ಹಾಕಿಕೊಂಡಿವೆ. ಸತ್ತಾಲ್ ಎಂಬ ಊರು ಕೂಡ ಏಳು ಸರೋವರಗಳಿಂದ ಆವೃತವಾದ ಪ್ರದೇಶ. ಬೆಟ್ಟಗಳ ನಡುನಡುವೆ